ಉ) ಸದರಿ ಯೋಜನೆಯಡಿ ಒಂದು ಪ್ರೌಢಶಾಲಾ ಕಟ್ಟಡಕ್ಕೆ ರೂ.9.00 ಲಕ್ಷದಂತೆ ಒಟ್ಟು 12 ಪ್ರೌಢಶಾಲೆಗೆ ರೂ.108.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಕೊರತೆ ಬರುವ ಮೊತ್ತವನ್ನು ಸಂಬಂಧಿಸಿದ ಜಿಲ್ಲಾ ಪಂಚಾಯತ್‌ಗಳೇ ಭರಿಸಬೇಕೆಂದು ಸೂಚಿಸಲಾಗಿದೆ.

ಬೀದರ್ ಜಿಲ್ಲೆ ಹುಮ್ನಾಬಾದ್ ಸಾರ್ವಜನಿಕ ಆಸ್ಪತ್ರೆಯಲ್ಲಿ ಮಹಿಳಾ ವೈದ್ಯಾಧಿಕಾರಿ ಕೊರತೆ

2619(2949) ಶ್ರೀ ಸುಭಾಶ್ ಕಲ್ಲೂರ್ (ಹುಮ್ನಾಬಾದ್) :— ನ್ನಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬೀದರ್ ಜಿಲ್ಲೆ ಹುಮ್ನಾಬಾದ್ ಸಾರ್ವಜನಿಕ ಆಸ್ಪತ್ರೆಯನ್ನು ಪ್ರಾರಂಭ ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೇ?

ಆ) ಇದ್ದಲ್ಲಿ, ಜರ್ಮನ್ ಅನುದಾನದಿಂದ ಎಷ್ಟು ಕೋಟಿ ಮೊತ್ತದಲ್ಲಿ ಈ ಆಸ್ಪತ್ರೆಯನ್ನು ನಿರ್ಮಿಸಲಾಗಿದೆ?

ಇ) ಈ ಆಸ್ಪತ್ರೆ ಎಷ್ಟು ಹಾಸಿಗೆಗಳುಳ್ಳ ಸಾಮರ್ಥ್ಯ ಹೊಂದಿದೆ; ಇದಕ್ಕೆ ಅನುಗುಣವಾಗಿ ವೈದ್ಯರಿದ್ದಾರೆಯೇ: (ವೈದ್ಯರ ಸಂಖ್ಯೆಯ ವಿವರ ನೀಡುವುದು)

ಈ) ಯಾವ ಯಾವ ವಿಷಯಗಳಲ್ಲಿ (ವಿಶೇಷ ತಜ್ಞರು) ಪರಿಣತಿ ಹೊಂದಿದ ವೈದ್ಯರಿದ್ದಾರೆ; ಇದರಲ್ಲಿ ಎಂ.ಡಿ ಮತ್ತು ಎಂ.ಎಸ್. ಮಾಡಿರುವವರ ಸಂಖ್ಯೆ ಎಷ್ಟು?

ಉ) ಈ ಆಸ್ಪತ್ರೆಯಲ್ಲಿ ಸ್ತ್ರೀರೋಗ ತಜ್ಞ, ಮಹಿಳಾ ವೈದ್ಯರು ಇದ್ದಾರೆಯೇ; ಇಲ್ಲದಿದ್ದಲ್ಲಿ, ಮಹಿಳಾ ವೈದ್ಯರ ನೇಮಕಕ್ಕೆ ಸರ್ಕಾರ ಯಾವ ಕ್ರಮ ಕೈಗೊಳ್ಳುವುದು?

ಡಾ: ಎ.ಬಿ. ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :—

ಅ) ಇದೆ

ಆ) ಹುಮ್ನಾಬಾದ್ ಸಾರ್ವಜನಿಕ ಆಸ್ಪತ್ರೆಯನ್ನು 30 ಹಾಸಿಗೆಗಳಿಂದ 50 ಹಾಸಿಗೆಗಳಿಗೆ ವಿಸ್ತರಿಸಿ ನವೀಕರಿಸಿ ಅಭಿವೃದ್ಧಿಗೊಳಿಸುವ ಕಾಮಗಾರಿ ಜರ್ಮನಿ ನೆರವಿನ ಕೆಎಫ್‌ಡಬ್ಲ್ಯೂ ಯೋಜನೆ ಮೊದಲನೇ ಹಂತದಲ್ಲಿ ಸೇರಿದ್ದು, ರಾಷ್ಟ್ರೀಯ ಸ್ಪರ್ಧಾತ್ಮಕ ಗುತ್ತಿಗೆ ಕರೆದು ರೂ.135.66 ಲಕ್ಷಗಳಿಗೆ ಗುತ್ತಿಗೆ ನೀಡಲಾಗಿದೆ ಹಾಗೂ ದಿನಾಂಕ 18.3.2000 ರಂದು ಒಪ್ಪಂದ ಮಾಡಿಕೊಳ್ಳಲಾಗಿದೆ. ಕಾಮಗಾರಿ ಪೂರ್ಣಗೊಳಿಸಲು ನಿಗದಿಪಡಿಸಿರುವ ಕಾಲಾವಧಿ 18 ತಿಂಗಳುಗಳು. ಕರಾರಿನಂತೆ ದಿನಾಂಕ: 17.9.2001 ರಂದು ಕಾಮಗಾರಿ ಪೂರ್ಣಗೊಳ್ಳಬೇಕಾಗುತ್ತದೆ.

ಇ) ಈ ಆಸ್ಪತ್ರೆಯು 50 ಹಾಸಿಗೆಗಳುಳ್ಳ ಸಾಮರ್ಥ್ಯ ಹೊಂದಿದೆ. 50 ಹಾಸಿಗೆಗಳ ಸಾಮರ್ಥ್ಯದ ಆಸ್ಪತ್ರೆಗೆ ಗೊತ್ತುಪಡಿಸಿರುವ ವೈದ್ಯರುಗಳ ಸಂಖ್ಯೆಯು 7 ಆಗಿದ್ದು, 6 ವೈದ್ಯರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ವೈದ್ಯರುಗಳ ವಿವರ ಕೆಳಕಂಡಂತಿದೆ.

			ಸಂಖ್ಯೆ
1.	ಮಕ್ಕಳ ತಜ್ಞರು	-	2
2.	ಕಣ್ಣಿನ ತಜ್ಞರು	-	1
3.	ಇ.ಎನ್‌ಟಿ ತಜ್ಞರು	-	1
4.	ಮೂಳೆ ತಜ್ಞರು	-	1
5.	ಅರವಳಿಕೆ ತಜ್ಞರು (ಗುತ್ತಿಗೆ ಆಧಾರದ ಮೇರೆಗೆ)	-	1

ಈ) ಎಂಡಿ/ಎಂ.ಎಸ್ ಮಾಡಿರುವವರು ಇರುವುದಿಲ್ಲ.

ಉ) ಇರುವುದಿಲ್ಲ.

ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿ ಭರ್ತಿ ಮಾಡಿಕೊಳ್ಳಲು ಜಿಲ್ಲಾಧಿಕಾರಿಗಳಿಗೆ ಅನುಮತಿ ನೀಡಲಾಗಿದೆ.

ಹುಮ್ನಾಬಾದ್ ತಾಲ್ಲೂಕಿನ ಆಸ್ಪತ್ರೆಗಳಲ್ಲಿ ರೋಗಿಗಳಿಗೆ ವಿತರಿಸುವ ಆಹಾರ

2620(2950) ಶ್ರೀ ಸುಭಾಶ್ ಕಲ್ಲೂರ್ (ಹುಮ್ನಾಬಾದ್) :— ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಹುಮ್ನಾಬಾದ್ ತಾಲ್ಲೂಕಿನ ಯಾವ ಯಾವ ದರ್ಜೆಯ ಆಸ್ಪತ್ರೆಗಳಿಗೆ ದಾಖಲಾಗಿರುವ ಒಳರೋಗಿಗಳಿಗೆ ಹಾಲೂ-ಬ್ರೆಡ್ ಉಪಹಾರ ಊಟ ವಿತರಿಸುವ ಅವಕಾಶವಿದೆ; ವಿವರ ನೀಡುವುದು)

ಆ) ಹುಮ್ನಾಬಾದ್ ತಾಲ್ಲೂಕಿನ ಸಾರ್ವಜನಿಕ ಆಸ್ಪತ್ರೆಯಲ್ಲಿ ಒಳರೋಗಿಗಳಿಗೆ ಉಪಹಾರ ಹಾಗೂ ಮಧ್ಯಾನ್ಹದ ಊಟವನ್ನು ಒದಗಿಸಲಾಗುತ್ತಿದೆಯೇ;

ಇ) ವಿತರಿಸುತ್ತಿದ್ದಲ್ಲಿ, ಎಷ್ಟು ಪ್ರಮಾಣದಲ್ಲಿ ವಿತರಿಸಲಾಗುತ್ತಿದೆ; (ವಿವರ ನೀಡುವುದು)

ಈ) ವಿತರಿಸದೇ ಇದ್ದಲ್ಲಿ, ಕಾರಣಗಳೇನು?